ಅ) ಹೌದು, ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 417ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಬೇಡಿಕೆ ಇದ್ದು, 20 ಅರ್ಜಿಗಳು ವಿವಿಧ ಹಂತಗಳಲ್ಲಿ ಬಾಕಿ ಉಳಿದಿವೆ.

ಆ) ಹೌದು, ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 44 ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಯಾವುದೇ ಅರ್ಜಿಯು ವಿದ್ಯುತ್ ಸಂಪರ್ಕಕ್ಕಾಗಿ ಪ್ರಸ್ತುತ ಬಾಕಿ ಉಳಿದಿಲ್ಲ.

ಇ) ಬಾಕಿ ಇರುವ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಿ ಆದ್ಯತೆ ಮತ್ತು ಹಿರಿತನದ ಪ್ರಕಾರ ವಿದ್ಯುತ್ ಸಂಪರ್ಕ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಈ) ಈ ಎರಡು ಯೋಜನೆಗಳ ಬಗ್ಗೆ ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 69.5 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ.

ವಿವರಗಳು ಕೆಳಕಂಡಂತಿದೆ.

1)	ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ	65 ಲಕ್ಷ ರೂ.
2)	ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ	4.5 ಲಕ್ಷ್ಷ ರೂ.
	ಒಟ್ಟು	69.5 ಲಕ್ಷ ರೂ.

ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

2384 - ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಪೂರೈಕೆಯ ಪ್ರತಿನಿತ್ಯ ವ್ಯತ್ಯಯ ಉಂಟಾಗಿ ಅಲ್ಲಿಯ ಕೈಗಾರಿಕೆ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಭಾರಿ ಅನಾನುಕೂಲ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ.*

ಇ) *ವಿದ್ಯುತ್ ಸರಬರಾಜು ಸುಧಾರಿಸಲು ಸರ್ಕಾರವು ಹುಬ್ಬಳ್ಳಿ ನಗರಕ್ಕೆ ಆಗತ್ಯ ವಿರುವ ಎಷ್ಟು ಕೆ.ವಿ. ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಿದೆ ಹಾಗೂ ಅದರ ವಿವರ ನೀಡುವುದು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ) ಹುಬ್ಬಳ್ಳಿ ಸಮೀಪದ ನರೇಂದ್ರದಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕಿನ ಸಾಲ ಸೌಲಭ್ಯದೊಡನೆ 220:110 ಕೆ.ವಿ.ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವನ್ನು ಡಿಸೆಂಬರ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) ಹುಬ್ಬಳ್ಳಿ ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂವ್‌ಮೆಂಟ್ ಸ್ಕೀಂ ನಡಿಯಲ್ಲಿ ಗೋಪನಕೊಪ್ಪ ಮತ್ತು ನವನಗರಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳ ನಿರ್ಮಾಣ.

ಇ) ಪವರ್ ಹೌಸ್ ಕಾಂಪೌಂಡ್ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳಲ್ಲಿ ತಲಾ 5 ಎಂ.ವಿ.ಎ. ಸಾಮರ್ಥ್ಯದ ಒಂದೊಂದು ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸುವುದು.

ಈ) ತರಿಹಾಳ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ 110 : 33 ಕೆ.ವಿ. ಪವರ್ ಟ್ರಾನ್ಸ್ ಫಾರ್ಮರ್‌ನ್ನು 20 ಎಂ.ವಿ.ಎ. ಸಾಮರ್ಥ್ಯದ 110:33ಕೆ.ವಿ. ಪವರ್ ಟ್ರಾನ್ಸ್ ಫಾರ್ಮರ್ ಮೂಲಕ ಬದಲಾಯಿಸುವುದು.

ಉ) ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿಯಾಗಿ 28 ವಿತರಣಾ ಟ್ರಾನ್ಸ್ ಫಾರ್ಮರ್ ಕೇಂದ್ರಗಳ ಸ್ಥಾಪನೆ ಮತ್ತು 48 ಕಡಿಮೆ ಸಾಮರ್ಥ್ಯದ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ಹೆಚ್ಚಿನ ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಬದಲಾಯಿಸುವುದು.

ಇ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ನಗರಕ್ಕೆ ಅಗತ್ಯವಿರುವ ಸುಮಾರು 95 ಎಂ.ವಿ.ಎ.ನಷ್ಟು ವಿದ್ಯುತ್ತನ್ನು ಸರಬರಾಜು ಮಾಡಲು ಯೋಜಿಸಿದ್ದು. ವಿದ್ಯುತ್ ಉಪಕೇಂದ್ರವಾರು ವಿವರಗಳು ಕೆಳಕಂಡಂತಿದೆ.

ಕ್ರ. ಸಂ.	ವಿದ್ಯುತ್ ಉಪ ಕೇಂದ್ರ	ಯೋಜಿತ ವಿದ್ಯುತ್ ಸರಬರಾಜಿನ ಪ್ರಮಾಣ
1.	ಶರಾವತಿ ರಿಸೀವಿಂಗ್ ಸ್ಟೇಷನ್	20 ಎಂ.ವಿ.ಎ.
2.	ತರೀಹಾಳ್	10 "
3.	ಗೋಪನಕೊಪ್ಪ	20 "
4.	ಕೈಗಾರಿಕಾ ಪ್ರದೇಶ	15 "
5.	ಪವರ್ ಹೌಸ್ ಕಾಂಪೌಂಡ್	10 "
6.	ನವನಗರ	20 "
	ಒಟ್ಟು	95 ಎಂ.ವಿ.ಎ.

ಹುಬ್ಬಳ್ಳಿ ನಗರದಲ್ಲಿ ಪಶು ವೈದ್ಯ ಆಸ್ಪತ್ರೆಗಳು

2388 - ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಎಷ್ಟು ಪಶು ವೈದ್ಯ ಆಸ್ಪತ್ರೆಗಳಿವೆ?

ಆ) ಅಲ್ಲಿ ಜಾನುವಾರುಗಳಿಗೆ ನೀಡಬೇಕಾದ ಅಗತ್ಯ ಚಿಕಿತ್ಸಾ ಸೌಲಭ್ಯಗಳಿವೆಯೇ?

ಇ) ಪರಿಣತ ವೈದ್ಯರ ಸಿಬ್ಬಂದಿ ಇದ್ದಾರೆಯೇ?

ಈ) ನಗರವು ಬೆಳೆಯುತ್ತಿದ್ದು, ಸುತ್ತೆಲ್ಲಾ ಹಳ್ಳಿಯ ಜನರು ಇಲ್ಲಿಗೆ ಬರುವುದರಿಂದ, ಇನ್ನೂ ಒಂದು ಸುಸಜ್ಜಿತ ಆಸ್ಪತ್ರೆ ನೀಡಲು ಸರ್ಕಾರ ಸಿದ್ದವಿದೆಯೇ?